# ಜಿನ ಕಥನಗಳ ಮೌನದಲಿ ದಾಟಿಸುವ
# ಬಸದಿ ಬೆಟ್ಟ

**ತುಮಕೂರು ಸಮೀಪದ ಮಂದರಗಿರಿ ತನ್ನ ಮೋಹಕತೆಯಿಂದ ಮರುಳು ಮಾಡುವಂತೆ, ಜಿನ ಪರಂಪರೆಯ ಇತಿಹಾಸದ ಕಾರಣದಿಂದಲೂ ಗಮನಸೆಳೆಯುತ್ತದೆ. ಜಿನ ಕಥನಗಳ ಮೌನಕೊಳದಂತೆ ಕಾಣಿಸುವ 'ಬಸದಿ ಬೆಟ್ಟ'ವಿದು.**

■ ಡಾ. ಕೀರ್ತಿ ಮಲ್ಹೋತ್ರ

ಹಲವು ವರ್ಷಗಳ ಹಿಂದೆ, ಕೆ.ಎಸ್.ಆರ್.ಟಿ.ಸಿ. ಬಸ್ಸಿನಲ್ಲಿ ಚಾಲಕರ ಹಿಂದಿನ ಆಸನದಲ್ಲಿ ಕುಳಿತು ಬೆಂಗಳೂರಿನಿಂದ ತುಮಕೂರಿಗೆ ಹೊರಟಿದ್ದೆ. ಈ ಹಾದಿಯಲ್ಲಿ ಹಿರೇಹಳ್ಳಿ ಮತ್ತು ಕ್ಯಾತ್ಸಂದ್ರದ ನಡುವೆ, ಬಲಗಡೆಗೆ ಒಂದು ಕಲ್ಲುಬಂಡೆಯಂತಹ ಬೆಟ್ಟದ ಮೇಲೆ ನಾಮದಂತೆ ಎಳೆದ ಬಿಳಿಯ ಗೆರೆ ಕಂಡು ಕುತೂಹಲವಾಯಿತು. ಅದೇ ದಿನ ಮಧ್ಯಾಹ್ನ ಸ್ಥಳೀಯ ಬಸ್ಸಿನಲ್ಲಿ ತುಮಕೂರಿನಿಂದ ಹಿಂತಿರುಗಿ ಹೊರಟು, ಪಂಡಿತನಹಳ್ಳಿ ಕ್ರಾಸ್ ಬಸ್ ನಿಲ್ದಾಣದಲ್ಲಿ ಇಳಿದೆ. ನನ್ನ ಮನಸೆಳೆದ ಈ ಬೆಟ್ಟವನ್ನು ಒಂದಿಷ್ಟು ಪರಿಶೋಧಿಸಲು ಹೊರಟೆ.

ಹಳ್ಳಿಯ ಮೂಲಕ ಹಾಯ್ದು, ಒಂದಿಷ್ಟು ಹಚ್ಚ ಹಸುರು ನೆಲದಲ್ಲಿ ಹರಡಿದ್ದ ಸಮಾಧಿಗಳ ನಡುವೆ ನಡೆದು, ಹೊಲದ ದಂಡೆಯೊಂದರ ಮೇಲೆ ಹೆಜ್ಜೆ ಹಾಕಿದೆ. ಬೆಟ್ಟದ ತಪ್ಪಲಿನಲ್ಲಿ ಎತ್ತರಕ್ಕೆ ನಿಂತ ಶ್ರೀ ಚಂದ್ರಪ್ರಭ ತೀರ್ಥಂಕರರ ಮೂರ್ತಿ ಮತ್ತು ಪಕ್ಕದಲ್ಲಿ ನವಿಲುಗರಿಗಳನ್ನು ಹೊದ್ದಂತೆ ಇದ್ದ ಗುರುಮಂದಿರ ಕಾಣಿಸಿದವು. ಇವು ಇತ್ತೀಚಿನ ವರ್ಷಗಳಲ್ಲಿ ಸ್ಥಾಪನೆಯಾದವು ಎಂದು ನಂತರ ತಿಳಿದುಬಂತು. ವಾರದ ದಿನವಾದ ಕಾರಣ, ಮಧ್ಯಾಹ್ನದ ವೇಳೆಯಲ್ಲಿ ಅಲ್ಲಿ ಮನುಷ್ಯರ ಸುಳಿವೇ ಇರಲಿಲ್ಲ. ಬೆಟ್ಟದ ಕಡೆಗೆ ನಡೆದಾಗ, ನಾನು ದೂರದಿಂದ ಕಂಡ ಬೆಟ್ಟದ ಮೇಲಿನ ಬಿಳಿಯ ನಾಮ, ಆ ಏಕಶಿಲಾ ಕಲ್ಲುಬಂಡೆಯಲ್ಲಿ ಕೊರೆದ ಸುಮಾರು 450 ಮೆಟ್ಟಿಲುಗಳಿಗೆ ಬಳಿದ ಬಿಳಿಯ ಬಣ್ಣವೆಂದು ತಿಳಿಯಿತು. ಮೆಟ್ಟಿಲುಗಳನ್ನು ಬಿಟ್ಟು, ಬಂಡೆಯ ಮೇಲೆ ತ್ವರಿತವಾಗಿ ಏರಿ ತುದಿಗೆ ತಲುಪಿದಾಗ, ನನ್ನೆದುರು ಜೈನ ಬಸದಿಗಳನ್ನು ಸುತ್ತುವರೆದ ಪುರಾತನ ಗೋಡೆ ಕಾಣಿಸಿತು. ಆ ಕೋಟೆಯಂತಹ ಗೋಡೆಯ ಸುತ್ತು ಬರುವಾಗ, ಬೆಟ್ಟದ ನಾಲ್ಕೂ ಬದಿಗೂ ಅನೇಕ ದೊಡ್ಡ ಬಂಡೆಗಲ್ಲುಗಳು ಕಂಡವು. ಅವುಗಳ ಮೇಲೆ ಪ್ರಾಣಿಗಳ ಚಿತ್ರವನ್ನು ಬಣ್ಣದಲ್ಲಿ ಬಿಡಿಸಿದ್ದರು.



ಬೆಟ್ಟದಲ್ಲಿ ಕಂಡ ಹನ್ನೆರಡನೇ ಶತಮಾನದ ಶಾಸನ

## ಬಸದಿಗೆ ಪ್ರವೇಶ

ಆ ಗೋಡೆಯಲ್ಲಿ ಪ್ರವೇಶ ಎಲ್ಲಿದೆ ಎಂದು ಹುಡುಕಿ ಹೊರಟಾಗ, ಗೋಡೆಯ ನಾಲ್ಕೂ ಬದಿಗಳಲ್ಲಿ ತೀರ್ಥಂಕರರ ಸುಂದರವಾದ ಬಣ್ಣದ ಚಿತ್ರಗಳು ಕಂಡವು. ಅವು ಹಳೆಯ ಚಿತ್ರಗಳ ಮೇಲೆ ಮತ್ತೆ ಮತ್ತೆ ಪೇಂಟ್ ಮಾಡಿದಂತೆ ಕಾಣಿಸಿದವು. ಹಿಂಬದಿಯ ಗೋಡೆಯಲ್ಲಿದ್ದ ತೀರ್ಥಂಕರರ ಚಿತ್ರವೊಂದು ನನ್ನನ್ನು ಆಕರ್ಷಿಸಿತು. ಕಾರಣ, ಆ ಚಿತ್ರದ ಎರಡೂ ಬದಿಗೆ ಕಲ್ಲು ಕಂಬಗಳಿದ್ದು, ಅವುಗಳ ಬುಡದಲ್ಲಿ ಆನೆಗಳ ಕೆತ್ತನೆ ಮತ್ತು ಅವುಗಳ ಮೇಲ್ತುದಿಯಲ್ಲಿ ಅಗಲವಾದ ಕಮಲದ ಕೆತ್ತನೆಯಿತ್ತು. ಅದು, ಬಹುಶಃ ಈ ಬಸದಿಯ ಮೂಲ ಪ್ರವೇಶ ದ್ವಾರವಾಗಿತ್ತು ಎಂಬ ನನ್ನ ಊಹೆ, ಒಳಗೆ ಹೋಗಿ ಅವಲೋಕಿಸಿದಾಗ ದಿಟವೆನಿಸಿತು. ಒಂದು ಸುತ್ತು ಬಂದಂತೆ, ಬದಿಯ ಗೋಡೆಯಲ್ಲಿ ಒಳಗೆ ಪ್ರವೇಶಿಸಲು ಆಧುನಿಕವಾದ ಕಬ್ಬಿಣದ ಗೇಟು ಕಾಣಿಸಿತು.

ಒಳ ಆವರಣದಲ್ಲಿ, ಸಾಲಾಗಿ ನಾಲ್ಕು ಬಸದಿಗಳಿದ್ದವು; ಅವುಗಳಿಂದ ತುಸು ದೂರ ಐದನೇ ಕಟ್ಟಡವಿತ್ತು. ಆ ಕಟ್ಟಡದ ಹಿಂಬದಿಯ ಭಾಗದಲ್ಲಿ ಸ್ತೂಪವಿತ್ತು. ಮೊದಲ ಬಸದಿಯಲ್ಲಿ ಯಾವ ಮೂರ್ತಿಯೂ ಇರಲಿಲ್ಲ. ಆದರೆ, ಉಳಿದ ಮೂರು ಬಸದಿಗಳಲ್ಲಿ ಪಾರ್ಶ್ವನಾಥ, ಸುಪಾರ್ಶ್ವನಾಥ ಮತ್ತು ಚಂದ್ರಪ್ರಭಾ ತೀರ್ಥಂಕರರ ಮೂರ್ತಿಗಳಿದ್ದವು. 2008ರಲ್ಲಿ ಈ ಜಿನಮಂದಿರಗಳ ಜೀರ್ಣೋದ್ಧಾರ ಕಾರ್ಯವನ್ನು ನಡೆಸಿದ ಉಲ್ಲೇಖವಿದ್ದ ಫಲಕ ಬಸದಿಯ ಆವರಣದಲ್ಲಿತ್ತು. ಎರಡನೆಯ ಬಸದಿಯ ಮೆಟ್ಟಿಲುಗಳ ಮೇಲೆ ಒಂದೇ ಒಂದು ಆನೆಯ ಮೂರ್ತಿ ಉಳಿದಿತ್ತು. ನಾಲ್ಕನೇ ಬಸದಿಯ ಎದುರು ಎತ್ತರದ ಮಾನಸ್ತಂಭವಿದ್ದು, ಅದು ಇತ್ತೀಚಿನ ವರ್ಷಗಳಲ್ಲಿ ನಿಲ್ಲಿಸಿದ್ದಾಗಿತ್ತು. ಐದನೇ ಸ್ತೂಪವಿದ್ದ ಕಟ್ಟಡದಲ್ಲಿ, ಕಲ್ಲಿನ ಮೇಲೆ ಪಾದಗಳ